ಟೀನರಸೀಪುರದ ಟಿ. ಎ. ಪಿ. ಸಿ. ಎಂ. ಎಸ್‌ಗೆ ಚುನಾವಣೆ ನಡೆಸುವ ಬಗ್ಗೆ

ಶ್ರೀ ಕೆ. ಜೆ. ರಾಮಸ್ವಾಮಿ.—ಟಿ. ನರಸೀಪುರ ಟಿ.ಎ.ಪಿ.ಸಿ.ಎಂ.ಎಸ್ ಇದರ ಆಡಳಿತಾಧಿಕಾರಿಯನ್ನು ರದ್ದು ಪಡಿಸಿ ಚುನಾವಣೆ ನಡೆಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ ? ಹಾಗಿದ್ದಲ್ಲಿ ಆಡಳಿತಾಧಿಕಾರಿಯನ್ನು ಇದುವರೆವಿಗೂ ಮುಂದುವರಿಸಿಕೊಂಡು ಬರಲು ಇರುವ ಕಾರಣಗಳೇನು ಮತ್ತು ಚುನಾವಣೆಯನ್ನು ಯಾವಾಗ ನಡೆಸಲಾಗುವುದು ಎನ್ನುವುದನ್ನು ಮಾನ್ಯ ಸಹಕಾರ ಮಂತ್ರಿಗಳು ತಿಳಿಸಬೇಕು ?

ಶ್ರೀ ಎಚ್. ವಿಶ್ವಾಂತಯ್ಯ (ಸಹಕಾರ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ ಟಿ. ನರಸೀಪುರ ಟಿ. ನ, ಪಿ, ಸಿ. ಎಂ ಸಿ.ಗೆ ಚುನಾವಣೆಯನ್ನು ಸಧ್ಯದಲ್ಲಿ ನಡೆಸುವುದಕ್ಕೆ ಸಾಧ್ಯವಿಲ್ಲ. ಈ ಬಗ್ಗೆ ಮೊಕ್ಕದ್ದಮೆಯೊಂದು ಇದೆ. ಅದು ಇತ್ಯರ್ಥವಾದ ಮೇಲೆ ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್.—ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು.

ಸ್ಪೆಷಲ್ ನ್ಯೂಟ್ರಿಷನ್ ಪ್ರೊಗ್ರಾಂ ಕಾರ್ಯಕ್ರಮದ ಯೋಜನೆಯಂ ಬದಲಾಗಿ ಆಂಗನವಾಡಿ ಯೋಜನೆಯಂನ್ನು ಜಾರಿಗೆ ತರುವುದು

ಶ್ರೀಮತಿ ಶಕುಂತಲ ಟಿ. ಚೌಗಲೆ (ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯಮಂತ್ರಿಯವರು ಸ್ಪೆಶಲ್ ನ್ಯೂಟಿಷನ್ ಪ್ರೋಗ್ರಾಂ ಕಾರ್ಯಕ್ರಮದ ಯೋಜನೆಗೆ ಬದಲಾಗಿ ಆಂಗನವಾಡಿಯ ಯೋಜನೆಯನ್ನು ಜಾರಿಗೆ ತರಬೇಕೆಂದು ಇಲಾಖೆಗೆ ಬರೆದಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ಬಂದಿದ್ದಲ್ಲಿ ಯಾವಾಗ ಬಂದಿದೆ ? ಮತ್ತು ಅದಕ್ಕೆ ಮುಂದಿನ ಕ್ರಮವನ್ನು ಯಾವಾಗ ತೆಗೆದುಕೊಳ್ಳುತ್ತೀರೆಂದು ತಿಳಿಸಬೇಕು ಈ ಪ್ರಸಾವನೆಯನ್ನು ಒಪ್ಪಿ ಜಾರಿಗೆ ತಂದರೆ ಸುಮಾರು ೨–೩ ಲಕ್ಷ ಮಹಿಳೆಯರ ಮಂತ್ತು ಮಕ್ಕಳ ಅಭಿವೃದ್ಧಿಯನ್ನು ಮಾಡಬಹುದು ಹಾಗೂ ನಾಲ್ಕು ಸಾವಿರ ಮಹಿಳೆಯರಿಗೆ ಕೆಲಸ ಕೊಡಬಹುದು. ಇಂತಹ ಆಂಗನವಾಡಿ ಯೋಜನೆಯಂನ್ನು ಬರುವ ೧–೪–೮೮ ರಿಂದಲೇ ಏತಕ್ಕೆ ಜಾರಿಗೆ ತರಬಾರದೆಂದು ನಾನು ಮಾನ್ಯ ಸಮಾಜ ಕಲ್ಯಾಣ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—ಮಾನ್ಯ ಅಧ್ಯಕ್ಷರೇ ಈ ಬಗ್ಗೆ ಚರ್ಚೆ ನಡೆದು ಇದನ್ನು ಡ್ರಾಪ್ ಮಾಡಲಾಗಿತ್ತು. ಆದರೆ ಮುಂದಿನ ವರ್ಷದಿಂದ ಈ ವಿಚಾರವನ್ನು ಗಣನೆಗೆ ತೆಗೆದುಕೊಳ್ಳಲಾಗುವುದು.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಮಾನ್ಯ ಸದಸ್ಯೆಯವರು ಗೈರು ಹಾಜರಿ.

೬. ಕರ್ನಾಟಕದಾದ್ಯಂತ ಗ್ರಾಮಂ ಸಹಾಯಕರಿಗೆ ಆರಂ ತಿಂಗಳಂಗಳಿಂದ ಸಂಬಳವನ್ನು ಕೊಡದಿರುವುದು.

ಶ್ರೀ ಆರ್. ವೆಂಕಟರಾಮಯ್ಯ. ಮಾನ್ಯ ಅಧ್ಯಕ್ಷರೇ ಕರ್ನಾಟಕದಾದ್ಯಂತ ಗ್ರಾಮ ಸಹಾಯಕರ ಸಂಬಳವನ್ನು ೬ ತಿಂಗಳಿಂದ ಕೊಟ್ಟಿಲ್ಲ. ಅವರು ಕೊಡುವ ಸಂಬಳ ತಿಂಗಳಿಗೆ ಮುನ್ನೂರು ರೂಪಾಯಿಗಳು ಮಾತ್ರ. ಅವರೆಲ್ಲರೂ ಮಾಜಿ ತೋಟಿ ಕೆಲಸ ನಿರ್ವಹಿಸುತ್ತಿದ್ದವರು, ಆ ಸಂಸಾರಗಳಿಂದ ಬಂದವರಾಗಿದ್ದು ತುಂಬಾ ಬಡವರಾಗಿದ್ದಾರೆ. ಎಲ್ಲರಿಗೂ ಸಂಬಳ ಸಾರಿಗೆ ಕೊಡದೆ ತುಂಬಾ ತೊಂದರೆ ನೀಡುತ್ತಿರುವುದರಿಂದ ಇವರ ಬಾಕಿ ಸಂಬಳವನ್ನು ಸರ್ಕಾರ ವಿತರಿಸುವುದು ನ್ಯಾಯಬದ್ಧವಾಗಿದೆ. ಈ ವಿಳಂಬ ಮತ್ತು ಪರಿಹಾರದ ಬಗ್ಗೆ ಮಾನ್ಯ ಕಂದಾಯ ಮಂತ್ರಿಗಳ ಗಮನ ಹರಿಸುತ್ತೇನೆ.

ಶ್ರೀ ಎಂ. ರಘುಪತಿ (ವಿಾನುಗಾರಿಕೆ ಮತ್ತು ಬಂದರು ಸಚಿವರು).—ಮಾನ್ಯ ಕಂದಾಯ ಮಂತ್ರಿಗಳ ಪರವಾಗಿ.

೧೯೮೭–೮೮ನೇ ಸಾಲಿನ ಲೆಕ್ಕ ಶೀರ್ಷಿಕೆ ''೨೦೫೫–ಭೂ ಕಂದಾಯ'' ಇದರ ಅಡಿಯಲ್ಲಿ ಗ್ರಾಮಂ ಸಹಾಯಕರಿಗೆ ಸಂಭಾವನೆ–ಮಾಜಿ ಶ್ಯಾನುಭೋಗರು, ಪಟೇಲರು ಮತ್ತು ಕೆಳದರ್ಜೆ ಗ್ರಾಮನೌಕರರಿಗೆ ಅನುಕಂಪ ಭತ್ಯೆ ಪಾವತಿಗಾಗಿ ವಿಭಾಗಾಧಿಕಾರಿಗಳು ಬೆಂಗಳೂರು, ಮೈಸೂರು, ಗುಲ್ಬರ್ಗಾ ಮತ್ತು